ಹೆತ್ತವರಿಗೆ. ಈ ಕಾಲದ ಯುವತಿ. ವಿದ್ಯಾವಂತೆ. ಆದರೂ ಸ್ವಸಂಪಾದನೆಯ ಹಂಬಲಕ್ಕೆ ಬೀಳದೆ ಮನೆಗೆ ಅಂಟಿಕೊಂಡಿದ್ದಾಳೆ. ನಾಳೆ ಮಕ್ಕಳುಮರಿ ಆದ ಮೇಲೆ ಕೆಲಸಕ್ಕೆ ಹೋಗುವುದು ಅಂದರೆ ಅಂದುಕೊಂಡಷ್ಟು ಸುಲಭವೇನಲ್ಲ. 'ಆಗಿದ್ದೆಲ್ಲಾ ಒಳ್ಳೆಯದಕ್ಕೇ...' ಅಂದುಕೊಂಡು ಪಂಕಜಾಕ್ಷಿ ನಿಶ್ಚಿಂತೆಯಿಂದಿದ್ದಳು.

***

'ಆಗಿದ್ದೆಲ್ಲಾ ಒಳ್ಳೆಯದಕ್ಕಾ?' ಗೊತ್ತಾಗುತ್ತಿಲ್ಲ ಈಗ. ಕಲ್ಪನಾಳ ಹೆತ್ತವರು ಮನೆಗೆ ಬರುವುದು, ಇರುವುದು ಸಾಧಾರಣ ಸಂಗತಿ ಎಂಬಂತಾಯ್ತು.

'ಇರಿ ನಾಲ್ಕು ದಿನ ಇಲ್ಲೇ. ಅಲ್ಲಿ ಇಬ್ಬರೇ ಇದ್ದು ಏನ್ಮಾಡ್ತೀರಿ?' ಹೆಂಡತಿಯ ಒತ್ತಾಸೆಯಿಂದ ಮಗ ಹೀಗೆ ಹೇಳುತ್ತಿದ್ದನೋ, ಅಥವಾ ಅವನ ಸ್ವಂತ ಅಭಿಪ್ರಾಯವೋ ಅವನ ಅಪ್ಪ, ಅಮ್ಮನಿಗೆ ಗೊತ್ತಿಲ್ಲ. ಹೇಗೂ ದೊಡ್ಡ ಮನೆ ಇದೆ. ಎಲ್ಲಾ ಒಟ್ಟಿಗೆ ಹರಟೆ ಹೊಡೆಯುತ್ತಾ, ಒಟ್ಟಿಗೆ ಊಟ ಮಾಡುತ್ತಾ ಕಾಲ ಕಳೆಯುವುದೆಂದರೆ ಅದರ ಸೊಗಸೇ ಬೇರೆ ಎಂದು ಮಗ ಸಕಾರಣವಾಗಿ ಯೋಚಿಸಿರಬಹುದು. ಅತ್ತ ಅಪ್ಪ, ಅಮ್ಮನಿಗೂ ಕುಶಾಲಾಗಿ ಸಮಯ ಕಳೆಯುತ್ತದೆ, ಇತ್ತ ಹೆಂಡತಿಯೂ ಖುಷಿಯಾಗಿರುತ್ತಾಳೆ. ಹಣದ ವಿಷಯದಲ್ಲಿ ಪರಸ್ಪರ ಅವಲಂಬನೆ ಇಲ್ಲ ಅಂದ ಮೇಲೆ ಎಲ್ಲಿದ್ದರೇನು? ಅಳಿಯ ಇಷ್ಟು ವಿಶ್ವಾಸದಿಂದ ಹೇಳುವಾಗ ಬಹುಶಃ ಅವರಿಗೆ ಒಲ್ಲೆನೆನ್ನಲಾಗುತ್ತಿರಲಿಲ್ಲ. ಅಥವಾ ಮುದ್ದಿನ ಮಗಳನ್ನು ಬಿಟ್ಟು ಪ್ರತ್ಯೇಕವಾಗಿರಲು ಅವರಿಗೂ ಮನಸ್ಸು ಬರುತ್ತಿರಲಿಲ್ಲ. ತಮ್ಮ ಸ್ವಂತ ಮನೆಯಲ್ಲಿ ಇರುವುದಕ್ಕಿಂತಾ ಬೀಗರ ಮನೆಯಲ್ಲೇ ಹೆಚ್ಚು ಕಾಲ ಕಳೆಯುವುದು ಅವರಿಗೆ ಮೈಯುಂಡುಹೋಯ್ತು. ಇದಕ್ಕೆ ಪಂಕಜಾಕ್ಷಿಯ ತಕರಾರು ತೀರಾ ಏನಿಲ್ಲ. ಆದರೆ ಆ ತಾಯಿ, ಮಗಳು ಸೇರಿಕೊಂಡು ಪಂಕಜಾಕ್ಷಿಯ ಸರ್ವಾಧಿಕಾರತ್ವದಲ್ಲಿದ್ದ ಅಡುಗೆಮನೆಯನ್ನು ಅದ್ಯಾವಾಗಲೋ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡುಬಿಟ್ಟಿದ್ದರು. ಇದರ ಕಷ್ಟ, ಅಥವಾ ವ್ಯಥೆ ಮೊದಮೊದಲು ಗೊತ್ತಾಗಿರಲಿಲ್ಲ ಪಂಕಜಾಕ್ಷಿಗೆ. 'ಕೂತಲ್ಲಿ ಮಣೆ, ನಿಂತಲ್ಲಿ ನೀರು' ಎಂದು ಉಪಚಾರ ಮಾಡಿಸಿಕೊಳ್ಳುವುದು ರುಚಿಯಾಗೇ ಕಂಡಿತ್ತು. ಆದರೆ ಕ್ರಮೇಣ ಗೊತ್ತಾಗತೊಡಗಿತ್ತು ಕೂತು ಉಣ್ಣುವ ಸುಖ.

ಅಮ್ಮ, ಮಗಳು ಸೇರಿಕೊಂಡು ರಸನೇಂದ್ರಿಯ ತಣಿಯುವಂತೆ ಅಡುಗೆ ತಯಾರಿಸುತ್ತಿದ್ದರು. ಹೊತ್ತಿಗೊಂದು ಬಗೆ ಮಾಡಬೇಕೆಂದರೂ ಅವರ ಹುರುಪು ತಗ್ಗುತ್ತಿರಲಿಲ್ಲ. ಎರಡು ಚಪಾತಿ ತಿನ್ನುವ ಜಾಗದಲ್ಲಿ ಅದರ ಜೊತೆಗಿರುವ ಸಬ್ಜಿಯ ರುಚಿಗೆ ಮನಸೋತು ಗಂಡ ಮೂರು ತಿಂದ ಅಂದರೆ ಪಂಕಜಾಕ್ಷಿಗೆ ತಲೆ ಕೆಡುತ್ತಿತ್ತು. 'ಧಾರಾಳವಾಗಿ ಎಣ್ಣೆ, ತುಪ್ಪ ಸುರಿದು ಮಾಡಿದ್ರೆ ರುಚಿಯಾಗ್ದೆ ಸಾಯುತ್ತಾ? ನಿಮಗೆ ಕೊಲೆಸ್ಟ್ರಾಲ್ ಇದೆ ಕಣ್ರೀ. ಮೈಮೇಲೆ ಜ್ಞಾನ ಇರ್ಲಿ...' ಹೊತ್ತು ಸಾಧಿಸಿ ಗಂಡನನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಳು. ಅವಳಿಗೂ ಬಿ.ಪಿ. ಇದೆ. ಶುಗರ್ ಬರುತ್ತೇನೆ ಅನ್ನುತ್ತಿದೆ. ನಿಗಾ ವಹಿಸಿದ್ದಾಳೆ ಪಂಕಜಾಕ್ಷಿ. ಆಹಾರದಲ್ಲಿ ಪಥ್ಯಪಾನಗಳನ್ನು ಕಡ್ಡಾಯವಾಗಿ ಪರಿಪಾಲಿಸಬೇಕಾದ ವಯಸ್ಸಿನಲ್ಲಿ ಹೀಗೆ ಯಾರದ್ದೋ ಅವಲಂಬನೆಯಲ್ಲಿ ಕಾಲ ಹಾಕಬೇಕಾದ್ದು ಅವಳ ಬಿ.ಪಿ.ಯನ್ನು ಮತ್ತಷ್ಟು ಹೆಚ್ಚಿಸಿದೆ. ಆಡುವಂತಿಲ್ಲ, ಅನುಭವಿಸುವಂತಿಲ್ಲ. ಪುಣ್ಯಾತ್ಮರು ಬೀಗರು. ಆರೋಗ್ಯ ಸುಸ್ಥಿತಿಯಲ್ಲಿದೆ. ನಾಲಿಗೆ ಚಪಲಕ್ಕೆ ಕಡಿವಾಣ ಹಾಕಬೇಕಾದ ಪರಿಸ್ಥಿತಿ ಇನ್ನೂ ಬಂದಿಲ್ಲ. ಎಲ್ಲರೂ ಹಾಗೇ ಇರುವುದಿಲ್ಲವಲ್ಲ?

ಅಡುಗೆಮನೆಯ ಬಾಗಿಲಲ್ಲಿ ಪಂಕಜಾಕ್ಷಿಯ ತಲೆ ಕಂಡರೆ ಸಾಕು, ಸೊಸೆ ಕೇಳುತ್ತಾಳೆ, ಅಥವಾ ಬೀಗಿತ್ತಿ ಇದ್ದರೆ ಅವರು ವಿಚಾರಿಸಿಕೊಳ್ಳುತ್ತಾರೆ, 'ಏನು ಬೇಕು ಹೇಳಿ. ಕಾಫಿ ಕುಡೀತೀರಾ? ಒಂದೇ ನಿಮಿಷ. ಬಿಸಿಬಿಸಿಯಾಗಿ ಮಾಡ್ಕೊಡ್ತೀನಿ...'

ತಮಗೆ ಬೇಕಾದ್ದನ್ನು, ತಮಗೆ ಬೇಕಾದಂತೆ, ತಾವೇ ತಯಾರಿಸಿಕೊಳ್ಳುವುದರಲ್ಲಿನ ಸುಖ ಪಂಕಜಾಕ್ಷಿಯ ಅರಿವಿಗೆ ಬರತೊಡಗಿತು. ಇದು ಮಾತ್ರವಾ? ಅವಳ ಅನೇಕ ಅಭ್ಯಾಸವೋ, ದುರಭ್ಯಾಸವೋ, ಅವುಗಳಿಗೆ ಬಲವಂತವಾಗಿ ತೆರೆ ಎಳೆಯಬೇಕಾಗಿ ಬಂದಿತ್ತು. ಮನೆಯ ದೊಡ್ಡ ಹಾಲ್‌ನಲ್ಲಿರುವ ಸೋಫಾದ ಮೇಲೆ ಮಲಗಿಕೊಂಡು ತನಗೆ ಬೇಕಾದ ಟೀವಿ ಸೀರಿಯಲ್‌ಗಳನ್ನು, ಬೇಕಾದ ವ್ಯಾಲ್ಯೂಮಿನಲ್ಲಿಟ್ಟುಕೊಂಡು ನೋಡುವುದು ಇಂತವುಗಳಲ್ಲಿ ಒಂದು. ಮನೆಯಲ್ಲಿ ಪರಪುರುಷರೊಬ್ಬರು ಇರುವಾಗ ಹೀಗೆ ಅಡ್ಡಾದಿಡ್ಡಿಯಾಗಿ ವರ್ತಿಸಲು ಸಾಧ್ಯವೇ? ಮನಸ್ಸಿರಲಿ, ಇಲ್ಲದಿರಲಿ ರೂಢಿಸಿಕೊಳ್ಳಬೇಕು ಗಾಂಭೀರ್ಯ. ಗಂಡ ನ್ಯೂಸ್ ಚಾನಲ್ ನೋಡುತ್ತಿದ್ದರೆ ಹಕ್ಕಿನಿಂದ ರಿಮೋಟ್ ಕಸಿದುಕೊಂಡು ತನಗೆ ಬೇಕಾದ್ದನ್ನು ಹಾಕಿಕೊಳ್ಳುವ ಸ್ವಾತಂತ್ರ್ಯ ಈಗಿಲ್ಲ. ಬೀಗರು ಅವರಿಗಿಷ್ಟವಾದ ಏನನ್ನೋ ನೋಡುತ್ತಿದ್ದರೆ ಇಷ್ಟವಿರಲಿ, ಬಿಡಲಿ, ಬಾಯ್ಮುಚ್ಚಿಕೊಂಡಿರಬೇಕು ಪಂಕಜಾಕ್ಷಿ. ಹಾಗಿರಬೇಕಾದ್ದು ಸೌಜನ್ಯ.



ಇದಕ್ಕೆ ಪರಿಹಾರ ಕಂಡುಕೊಳ್ಳುವುದು ಕಷ್ಟವೇನಲ್ಲ. ತಮ್ಮ ರೂಮಿನಲ್ಲೇ ಇನ್ನೊಂದು ಟೀವಿ ತಂದಿಟ್ಟುಕೊಂಡರಾಯ್ತು. ಆದರೆ ತಾವೇ ಇಷ್ಟಪಟ್ಟು ತಮ್ಮ ಸ್ವಯಾರ್ಜಿತ ದುಡ್ಡಿನಿಂದ ಕಟ್ಟಿಸಿಕೊಂಡ ಮನೆಯಲ್ಲಿ ತಮಗೆ ಇಷ್ಟ ಬಂದಹಾಗೆ ಇರುವುದಕ್ಕಾಗುವುದಿಲ್ಲ ಅಂದರೆ ಏನರ್ಥ ಎನ್ನುವ ಕಸಿವಿಸಿ ಕೊರೆಯುತ್ತಿತ್ತು.

'ತಾವು ಇರುವುದು ಸ್ವಂತ ಮನೆಯಲ್ಲಲ್ಲ, ನೆಂಟರ ಮನೆಯಲ್ಲಿ' ಎಂದು ಹೆಣ್ಣು ಕೊಟ್ಟವರು ಅರ್ಥ ಮಾಡಿಕೊಳ್ಳಬೇಕಾದ್ದು ಅವರ ಲೌಕಿಕಜ್ಞಾನಕ್ಕೆ ಸಂಬಂಧಿಸಿದ್ದು. ಮನೆಯಲ್ಲಿ ಒಂದೋ, ಎರಡೋ ಮಕ್ಕಳಿರುವ ಕಾಲಮಾನದಲ್ಲಿ ಹೆಣ್ಣುಮಗಳನ್ನು ಮದುವೆ ಮಾಡಿ ಕಳಿಸಿಕೊಟ್ಟ ನಂತರ ತಾವು ತಾವೇ ಇರುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು ಎಂದು ಹೇಳುವುದು, ಯೋಚಿಸುವುದೂ ಕೂಡಾ ತಪ್ಪಾಗಿಬಿಡುತ್ತದೆ. ಹೆಣ್ಣಾಗಲಿ, ಗಂಡಾಗಲಿ, ಒಂದೇ ವಿಧದ ಸೌಕರ್ಯಗಳನ್ನೊದಗಿಸಿ, ಅಕ್ಕರೆ ತೋರಿಸಿ ಬೆಳೆಸಿರುತ್ತಾರೆ. ವಿದ್ಯೆ, ಬುದ್ಧಿ ಕಲಿಸಿರುತ್ತಾರೆ. ಮದುವೆ ಮಾಡಿಕೊಟ್ಟ ತಕ್ಷಣ ಹೆಣ್ಣು ಪರರ ವಸ್ತು ಅಂದುಕೊಳ್ಳುವುದು ಹಳೆಗಾಲದ ಮನೋಧರ್ಮ. ಈ ಕಾಲದಲ್ಲಿ ಇಬ್ಬರೂ ಒಂದೇ. ಭೇದಭಾವ ಮಾಡುವುದೇ ತಪ್ಪು.

'ಅಡುಗೆಗೆ ತೆಂಗಿನಕಾಯಿ ಜಾಸ್ತಿ ಬಳಸಬೇಡಿ. ಎಣ್ಣೆ ಹಾಕಬೇಡಿ' ಎಂದು ಪ್ರತ್ಯಕ್ಷವಾಗಿರಲಿ, ಪರೋಕ್ಷವಾಗಿ ಹೇಳುವುದಕ್ಕೂ ಸಂಕೋಚ ಪಂಕಜಾಕ್ಷಿಗೆ. ಗಂಡನ ಕೊಲೆಸ್ಟ್ರಾಲನ್ನು, ತನ್ನ ಬಿ.ಪಿ. ಯನ್ನು ಸೊಸೆಯ ಕಿವಿ ತಲುಪಿಸಿದ್ದಾಳೆ. ಇದನ್ನು ತನ್ನಮ್ಮನಿಗೆ ಸೊಸೆ ಹೇಳಿದಳೋ, ಬಿಟ್ಟಳೋ, 'ಅಯ್ಯೋ, ಎಷ್ಟು ಕಾಲ ಬದುಕಿರ್ತೀವೋ ಯಾರಿಗೆ ಗೊತ್ತುಂಟು? ಇರೋವಷ್ಟು ದಿನ ರುಚಿರುಚಿಯಾಗಿ ತಿಂದಿದ್ದೇ ಬಂತು. ಡಾಕ್ಟ್ರ ಹತ್ರ ಹೋದ್ವಿ ಅಂದ್ರೆ ಏನೋ ಒಂದು ಕಾಯಿಲೆ ಪತ್ತೆ ಮಾಡ್ತಾರೆ...' ಎನ್ನುವುದು ಬೀಗಿತ್ತಿಯ ಧೋರಣೆ.